( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ 20/04/2024**
**ಅಸಲು ದಾವೆ.ನಂ. 146/2010**
**ಪಿ.ಡಬ್ಲ್ಯೂ1**

( ಪಾಟೀ ಸವಾಲುಃ ಶ್ರೀ. ಎಸ್.ಪಿ.ಜೆ. ವಕೀಲರಿಂದ 2 ನೇ ಪ್ರತಿವಾದಿ ಪರವಾಗಿ )

ದಾವಾ ಅನುಸೂಚಿ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಸಂಪೂರ್ಣ ಮಾಹಿತಿ ನಾನು ತಿಳಿದುಕೊಂಡಿರುತ್ತೇನೆ. ದಾವಾ ಪತ್ರದಲ್ಲಿರುವ ಅಂಶಗಳನ್ನು ನಾನು ಹಾಗೂ ನನ್ನ ತಾಯಿ ಹೇಳಿ ಬರೆಯಿಸಿರುತ್ತೇವೆ ನೀವು ನ್ಯಾಯಾಲಯಕ್ಕೆ ಸಲ್ಲಿಸಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸನಂಃ59/1 ಎ 7 ರಲ್ಲಿ 15 ಗುಂಟೆ ಜಮೀನನ್ನು ಜಯಮ್ಮನವರಿಗೆ ಬಿಟ್ಟುಕೊಟ್ಟಿರುವುದಾಗಿ ಹೇಳಿರುತ್ತೀರಿ, ಅದು ಅವರಿಗೆ ಹಕ್ಕು ಖುಲಾಸೆ ಪತ್ರದ ಮೂಲಕ 2 ನೇ ಪ್ರತಿವಾದಿ ಬಿಟ್ಟುಕೊಟ್ಟಿರುವುದು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ದಾವಾ ಪತ್ರದಲ್ಲಿ ಮತ್ತು ನ್ಯಾಯಾಲಯಕ್ಕೆ ಸಲ್ಲಿಸಿರುವ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸನಂಃ59/1 ಎ 7 ರಲ್ಲಿ 15 ಗುಂಟೆ ಜಮೀನನ್ನು ಜಯಮ್ಮನವರಿಗೆ ಬಿಟ್ಟುಕೊಡಲಾಗಿದೆ ಎಂದು, ಅವರಿಗೆ ಹಕ್ಕು ಖುಲಾಸೆ ಪತ್ರವನ್ನು ಮಾಡಿ ಕೊಟ್ಟಿರುವುದರಿಂದ ಹೇಳಿರುತ್ತೀರಿ ಎಂದರೆ ಸಾಕ್ಷಿಯು ನನಗೆ ಹಕ್ಕು ಖುಲಾಸೆ ಪತ್ರದ ಬಗ್ಗೆ ಮಾಹಿತಿ ಇಲ್ಲ ಪಹಣಿಯಲ್ಲಿ ಆ ರೀತಿ ನಮೂದು ಇದ್ದುದ್ದರಿಂದ ದಾವಾ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಆ ರೀತಿ ಹೇಳಲಾಗಿದೆ ಎಂದು ನುಡಿಯುತ್ತಾರೆ. ಸದರಿ ಪಹಣಿಯ ಪ್ರಕಾರ ಜಯಮ್ಮನವರಿಗೆ ಹೆಸರಿಗೆ ಮುಟೇಷನ್ ಕೂಡ ಆಗಿರುತ್ತದೆ ಎಂದರೆ ಸರಿ. ಸದರಿ ಜಯಮ್ಮನವರಿಗೆ ಹೆಸರಿಗೆ ಆಗಿರುವ ಮುಟೇಷನ್ ನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯ, ಅದನ್ನು ನೋಡಿ ಗುರುತಿಸಿ ಒಪ್ಪಿದ ಮೇರೆಗೆ, ಸದರಿ ಎಂ.ಆರ್.8/2004-05 ರ ಹಕ್ಕು ಬದಲಾವಣೆ ವಹಿಯನ್ನು ನಿಡಿ-1 ಎಂದು ಗುರುತಿಸಲಾಯಿತು.

ಸದರಿ ನಿಡಿ-1 ರಲ್ಲಿರುವ ಜಯಮ್ಮ ಎಂದರೆ 2 ನೇ ಪ್ರತಿವಾದಿಯ ಅಕ್ಕ ಎಂದರೆ ಸರಿ. ಸದರಿ 2 ನೇ ಪ್ರತಿವಾದಿಯ ಹಿಸ್ಸೆ ಬಂದ ಜಮೀನಿನಲ್ಲಿ ಅವರ ಅಕ್ಕನಾದ ಜಯಮ್ಮರವರಿಗಾಗಿ 15 ಗುಂಟೆ ಜಮೀನನ್ನು ಬಿಟ್ಟುಕೊಟ್ಟರು ಎಂರದೆ ಸರಿ. 2 ನೇ ಪ್ರತಿವಾದಿ ಜಯಮ್ಮರವರಿಗೆ ಸದರಿ 15 ಗುಂಟೆ ಜವೀನನ್ನುದಿಃ26-07-2004 ರ ಹಕ್ಕು ಖುಲಾಸೆ ಪತ್ರದ ಮೂಲಕ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸದರಿ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಜಯಮ್ಮನವರಿಗೆ 15 ಗುಂಟೆ ಜಮೀನು ಹೇಗೆ ಹೋಗಿರುತ್ತದೆ ಎಂದು ನಿಮ್ಮ ವಕೀಲರಿಗೆ ಹೇಳಿ ಬರೆಯಿಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದು, ಮುಂದವರೆದು ಪಹಣಿಯಲ್ಲಿ ಇರುವ ಪ್ರಕಾರ ಬರೆಸಲಾಗಿದೆ ಎಂದು ನುಡಿಯುತ್ತಾರೆ. ಹಕ್ಕು ಖುಲಾಸೆ ಪತ್ರ ಆಗಿರುವ ವಿಚಾರ ನನಗೆ ಗೊತ್ತಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ19-11-1977 ರಂದು ನನ್ನ ಅಜ್ಜನಾದ ಕಾಳಪ್ಪಶೆಟ್ಟಿಯವರು ಸ.ನಂಃ 59/2 ರಲ್ಲಿ 14 ಗುಂಟೆ ಹಾಗೂ 3 ಎಕರೆ 28 ಗುಂಟೆ ಅಂದರೆ 4 ಎಕರೆ 2 ಗುಂಟೆ ಜಮೀನನ್ನು ಕ್ರಯಕ್ಕೆ

ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಸದರಿ ಕ್ರಯ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಸದರಿ ಕ್ರಯ ಪತ್ರವನ್ನು ನಿಡಿ-2 ಎಂದು ಗುರುತಿಸಲಾಯಿತು. ದಿಃ09-11-1977 ರಲ್ಲಿ ನನ್ನ ತಂದೆಯಾದ ಬಿ.ಕೆ. ನರಸಿಂಹಶೆಟ್ಟಿಯವರು ಸ.ನಂಃ 59/1 ರಲ್ಲಿ 2 ಎಕರೆ 20 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದುಕೊಂಡಿದ್ದರು ಎಂದರೆ ಸರಿ. ಸಾಕ್ಷಿಗೆ ಸದರಿ ಕ್ರಯ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಸದರಿ ಕ್ರಯ ಪತ್ರವನ್ನು ನಿಡಿ-3 ಎಂದು ಗುರುತಿಸಲಾಯಿತು. 1977 ನೇ ಸಾಲಿನಲ್ಲಿ ಸದರಿ ಸ್ವತ್ತುಗಳನ್ನು ಕ್ರಯಕ್ಕೆ ಪಡೆದುಕೊಂಡ ಸಮಯದಲ್ಲಿ ನನ್ನ ತಂದೆ ಹಾಗೂ ಚಿಕ್ಕಪ್ಪನಾದ 2 ನೇ ಪ್ರತಿವಾದಿ ಒಟ್ಟುಕುಟುಂಬದಲ್ಲಿ ಇದ್ದರು ಎಂದರೆ ಸರಿ.

ದಿಃ26-11-1992 ರಕ್ರಯು ಪತ್ರವನ್ನು ಸಾಕ್ಷಿಗೆ ತೋರಿಸಿ ಸದರಿ ಕ್ರಯ ಪತ್ರವನ್ನು 1 ನೇ ವಾದಿ 2 ಮತ್ತು 3 ನೇ ವಾದಿಗಳ ಗಾರ್ಡಿಯನ್ ಆಗಿ ಪ್ರತಿವಾದಿಗಳಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಆ ರೀತಿ ಯಾವುದೇ ಕ್ರಯ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಅದನ್ನು ಅವರೇ ಬರೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರವನ್ನು ವಕೀಲರಾದ ಗಣೇಶಶೆಟ್ಟಿ ಯವರು ಬರೆದಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿಯು ಅಂದರೆ 1 ನೇ ವಾದಿಯ ಸಹಿಯನ್ನು ನಾನು ಗುರುತಿಸಲು ಆಗುವುದಿಲ್ಲ. ಸಾಕ್ಷಿಗೆ ದಾವಾ ಪತ್ರವನ್ನು ತೋರಿಸಿ ಅದರಲ್ಲಿರುವ 1 ನೇವಾದಿಯ ಸಹಿಯನ್ನು ಗುರುತಿಸಬಹುದೇ ಎಂದರೆ ಸಾಕ್ಷಿಯು ಅದನ್ನು ಗುರುಸಲು ಆಗುತ್ತದೆ, ಆದರೆ ದಿಃ26-11-1992 ರ ಕ್ರಯ ಪತ್ರದಲ್ಲರುವ 1 ನೇ ವಾದಿಯದ್ದು ಎನ್ನಲಾದ ಸಹಿಯನ್ನುನನಗೆ ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯುಮತ್ತೆ ಮುಂದುವರೆದು ದಾವಾ ಪತ್ರಕ್ಕೆ 1 ನೇ ವಾದಿ ನನ್ನ ಎದುರಿಗೆ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ ದಾವಾ ಪತ್ರದಲ್ಲಿರುವ ಯಶೋಧಮ್ಮ ಮತ್ತು ವಿಜಯಲಕ್ಷ್ಮಿ ಎಂದು ಸಹಿ ಮಾಡಿರುವುದು ಯಾರ ಸಹಿ ಎಂದರೆ ಸಾಕ್ಷಿಯು ಅದು ನನ್ನ ಹಾಗೂ ನನ್ನ ತಂಗಿಯ ಸಹಿ ಎಂದು ನುಡಿಯುತ್ತಾರೆ. ಸಾಕ್ಷಿಗೆ ದಿಃ26-11-1992 ರ ಕ್ರಯ ಪತ್ರದಲ್ಲಿ ವಿಜಯಲಕ್ಷ್ಮಿ ಎಂದು ಇರುವ ಸಹಿ ಯಾರದ್ದು ಎಂದು ಕೇಳಲಾಗಿ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರದ ಪ್ರತಿವಾದಿಗಳಿಗೆ ಹಕ್ಕು ವರ್ಗಾವಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರದಲ್ಲಿ ನಮೂದಿಸಿರುವ ಆಸ್ತಿ ನನ್ನ ತಂದೆಯ ಹಿಸ್ಸೆಗೆ ಬಂದಿರುವ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯ ಹಿಸ್ಸೆ ಬಂದ ಆಸ್ತಿಯನ್ನು ಸದರಿ ದಿಃ26-11-1992 ರ ಕ್ರಯ ಪತ್ರದಲ್ಲಿ ನಮೂದಿಸಿ, ಪ್ರತಿವಾದಿಗಳಿಗೆ ಹಕ್ಕು ವರ್ಗಾವಣೆ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು, 1 ಮತ್ತು 3 ನೇ ವಾದಿಗಳು ದಿಃ26-11-1992 ರ ಕ್ರಯ ಪತ್ರವನ್ನು ಬರೆದುಕೊಟ್ಟಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರದ ಪ್ರಕಾರ ಪ್ರತಿವಾದಿಗಳ ಹೆಸರಿಗೆ ಹಕ್ಕು ವರ್ಗಾವಣೆಯಾಗಿದ್ದು ಅದರ ಖಾತೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಿ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು, ಪ್ರತಿವಾದಿಗಳು ಸುಳ್ಳು ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಪ್ರತಿವಾದಿಗಳ ಹೆಸರಿಗೆ ಖಾತೆ ವರ್ಗಾವಣೆಯಾದ ನಂತರ ಇಬ್ಬರೂ ಪ್ರತಿವಾದಿಗಳು ಸಮವಾಗಿ ಆಸ್ತಿಯನ್ನು ಹಂಚಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಹೆಸರಿಗೆ ಖಾತೆ ವರ್ಗಾವಣೆಯಾಗಿರುವ ವಿಚಾರ 2010 ನೇ ಇಸವಿಯಲ್ಲಿ ತಿಳಿದುಬಂದಿರುತ್ತದೆ. 2006 ನೇ ಇಸವಿಯಲ್ಲಿ ಆ ರೀತಿ ಖಾತೆ ವರ್ಗಾವಣೆಯಾಗಿದ್ದ ಬಗ್ಗೆ ಒಂದು ಬಾರಿ ಮಾತುಕತೆಯಾಗಿರುತ್ತದೆ ಎಂದರೆ ಸರಿ. ಆ ರೀತಿ ಖಾತೆ ವರ್ಗಾವಣೆಯಾಗಿರುವ ವಿಚಾರ ನಿಮ್ಮ ಗಮನಕ್ಕೆ ಬಂದ ನಂತರ ಸದರಿ ಖಾತೆ ತಪ್ಪಾಗಿ ಬದಲಾವಣೆ ಆಗಿರುತ್ತದೆ, ಅದನ್ನು ವಾಪಸು ನಿಮ್ಮ ಹೆಸರಿಗೆ ಮಾಡಿ ಕೊಡಿ ಎಂದು ಯಾವುದೇ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತೀರಾ ಎಂದರೆ ಸಾಕ್ಷಿಯು ಯಾವುದೇ ದಾವೆಯನ್ನು ಹೂಡಿರುವುದಿಲ್ಲ, ಅದರೆ ಮನೆಯಲ್ಲಿಯೇ ತೀರ್ಮಾನ ಆಗಿರುತ್ತದೆ ಎಂದು ನುಡಿಯುತ್ತಾರೆ.

ಈ ಹಿಂದೆ ನಿಮ್ಮ ತಂದೆ ಮತ್ತು ಚಿಕ್ಕಪ್ಪಂದಿರ ನಡುವೆ ನಿಮ್ಮ ಕುಟುಂದಲ್ಲಿ ಹಿಸ್ಸೆಯಾಗಿರುದರಿಂದ ಇನ್ನೊಂದು ಬಾರಿ ಹಿಸ್ಸೆ ಕೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ಆ ರೀತಿ ಯಾವುದೇ ಹಿಸ್ಸೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತುಗಳಲ್ಲಿ ನಮಗೆ ಯಾವುದೇ ಹಿಸ್ಸೆ ಹಕ್ಕು ಇಲ್ಲದೆ ಇದ್ದರೂ ಕೂಡ ಪ್ರತಿವಾದಿಗಳಿಂದ ಅಕ್ರಮ ಲಾಭ ಹೊಂದುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹಾಕಲಾಗಿದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳಲ್ಲಿ ನಿಮಗೆ ಯಾವುದೇ ಹಿಸ್ಸೆಯ ಹಕ್ಕು ಇಲ್ಲ ಎಂದು ತಿಳಿದಿದ್ದರೂ ಕೂಡ ಈ ದಾವೆಯನ್ನು 14 ವರ್ಷಗಳ ಕಾಲ ಮುಂದುಡಿಕೊಂಡು ಬಂದಿರುತ್ತೀರಿ ಎಂದರೆ ಸಾಕ್ಷಿಯ ನಮಗೆ ಒಪ್ಪಂದ ಮಾಡಿಕೊಳ್ಳುವಾ ಎಂದು ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹೇಳಿದ ರೀತಿ ಯಾವುದೇ ಒಪ್ಪಂದಆಗಿಲ್ಲ ಎಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ)

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )
ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.